INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -3, May--June, 2024,
PageNo,42- 54
Peer -Reviewed, Refereed Journal

# ತೀರ್ಥಹಳ್ಳಿ ಪ್ರದೇಶದ ವಿಜಯನಗರದ ಅರಸರ ಕಾಲದ ಶಾಸನಗಳು – ಒಂದು ಪರಿವೀಕ್ಷಣೆ

ಡಾ.ಎಂ.ಕೊಟ್ರೇಶ್. [1]

ದಕ್ಷಿಣ ಭಾರತದ ಘನ ಚರಿತ್ರೆಯಲ್ಲಿ ಕರ್ನಾಟಕ ರಾಜ್ಯದಲ್ಲಿನ ಜಿಲ್ಲೆಗಳಲ್ಲಿ ಶಿವಮೊಗ್ಗ ಜಿಲ್ಲೆಯು ಒಂದು ಪ್ರಮುಖ ಸ್ಥಾನವನ್ನು ತನ್ನದೇ ಆದಂತಹ ರೀತಿಯಲ್ಲಿ ಪಡೆದುಕೊಂಡಿದೆ. ಹಾಗೆಯೇ, ಕರ್ನಾಟಕದ ಹೃದಯ ಭಾಗದಂತಿರುವ ಶಿವಮೊಗ್ಗ ಜಿಲ್ಲೆ ಶಿಲಾಯುಗದ ಮಾನವನ ಕಾಲಘಟ್ಟದಿಂದ ಹಿಡಿದು ಇಂದಿನವರೆಗೆ ಕಾರ್ಯಶೀಲವಾಗಿರುವ ನಾಡು. ಇದು ಕರ್ನಾಟಕ ರಾಜ್ಯದಲ್ಲಿನ ಅತಿ ಹೆಚ್ಚಿನ ನೈಸರ್ಗಿಕ ಸಂಪನ್ಮೂಲಗಳಿಂದಲೂ ಹಾಗೂ ಸಾಂಸ್ಕೃತಿಕ ಪರಂಪರೆಯ ಇತಿಹಾಸಗಳಿಂದಲೂ ಕೂಡಿದೆ. ಆದ್ದರಿಂದಲೇ ಇದು ಸಹ ನಮ್ಮ ಭಾರತದ ಘನ ಸಾಂಸ್ಕೃತಿಕ ಚರಿತ್ರೆಯ ಸಂದರ್ಭದಲ್ಲಿ ಅಗ್ರಮಾನ್ಯ ಸ್ಥಾನವನ್ನು ಪಡೆಕೊಂಡಿದೆ ಎಂಬುದು ತಿಳಿದುಬರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ಒಂದು ತುಲನಾತ್ಮಕವಾಗಿ ದೃಷ್ಟಿಕೋನದಿಂದಲೇ ಅವಲೋಕಿಸಿದಾಗ; ಇತಿಹಾಸದ ಉದ್ದಕ್ಕೂ ಒಂದಲ್ಲಾ ಒಂದು ರೀತಿಯ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ, ಚಾರಿತ್ರಿಕ ಹಾಗೂ ಪ್ರಧಾನವಾಗಿ ಧಾರ್ಮಿಕ ಕಾರ್ಯಚಟುವಟಿಕೆಗಳನ್ನು ಬಹುಮುಖ್ಯವಾಗಿಯೇ ಗುರುತಿಸಬಹುದು. ಹಾಗೆಯೇ ಪ್ರಧಾನವಾಗಿ; ಒಂದಲ್ಲ ಒಂದು ಹಂತದಲ್ಲಿ ತನ್ನದೇ ಆದಂತಹ ವಿಶಿಷ್ಟ ಕೊಡುಗೆಗಳನ್ನು ಸಹ ಸಲ್ಲಿಸುವ ಹಲವು ಹತ್ತು ಚಾರಿತ್ರಿಕ ಪ್ರದೇಶಗಳಲ್ಲಿ ಈ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕು ಪ್ರದೇಶವೂ ಕೂಡ ಒಂದು ಎಂದು ಹೇಳಬಹುದು. ಆದ್ದರಿಂದಲೇ ಕರ್ನಾಟಕ ರಾಜ್ಯದಲ್ಲಿನ ಚಾರಿತ್ರಿಕ ಪ್ರದೇಶದ ಸಮಗ್ರ ಅಧ್ಯಯನವನ್ನು ಕ್ರೂಢೀಕರಿಸಿಕೊಂಡು ತೀರ್ಥಹಳ್ಳಿ ತಾಲೂಕು ಪ್ರದೇಶದ ಸಾಂಸ್ಕೃತಿಕ ಅಂಶಗಳನ್ನು ಕುರಿತ ಅಧ್ಯಯನವೆಂಬ ಈ ಮಹಾಪ್ರಬಂಧವನ್ನು ರಚಿಸಲಾಗಿದೆ. ಆದ್ದರಿಂದಲೇ ಶಿವಮೊಗ್ಗ

[1]. ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

ಜಿಲ್ಲೆಯ ತಾಲೂಕು ಪ್ರದೇಶಗಳಲ್ಲಿ ತೀರ್ಥಹಳ್ಳಿ ತಾಲೂಕು ಪ್ರಸ್ತುತ ಸಂಶೋಧನಾ ವಸ್ತುವಿಷಯದ ಅಧ್ಯಯನ ಕ್ಷೇತ್ರವಾಗಿದೆ ಎಂದು ಹೇಳಬಹುದು.

ಕರ್ನಾಟಕ ರಾಜ್ಯದಲ್ಲಿನ ಜಿಲ್ಲಾ ಪ್ರದೇಶಗಳಲ್ಲಿ ಒಂದಾಗಿರುವಂತಹ ಶಿವಮೊಗ್ಗ ಜಿಲ್ಲೆಯಲ್ಲಿನ ಏಳು ತಾಲೂಕುಗಳ ಪೈಕಿ ತೀರ್ಥಹಳ್ಳಿ ತಾಲೂಕು ಪ್ರದೇಶವೂ ತನ್ನದೇ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುತ್ತದೆ. ಈ ಪ್ರದೇಶದಲ್ಲಿನ ವಸ್ತುವಿಷಯವನ್ನು ಆಧರಿಸಿ ಮತ್ತು ಅದನ್ನೇ ಕೇಂದ್ರೀಕರಿಸಿ ತಳಸ್ಪರ್ಶಿಯಾದ ಸಮಗ್ರ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಹಾಗಾಗಿಯೇ, ಪ್ರಸ್ತುತ ಅಧ್ಯಯನದ ಕೇಂದ್ರೀಯ ವಸ್ತುವಿಷಯವು ಪ್ರಧಾನವಾಗಿ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಆಡಳಿತಾತ್ಮಕ ಸಂಕೀರ್ಣತೆಯ ಪ್ರಧಾನ ವಿಷಯಗಳಿಂದಲೇ ಕೂಡಿರುತ್ತದೆ ಎಂದು ಹೇಳಬಹುದು. ಈ ತಾಲೂಕು ಪ್ರದೇಶವು ಚಾರಿತ್ರಿಕತೆ ಮತ್ತು ಪ್ರವಾಸಿ ತಾಣಕ್ಕೂ ಕೂಡ ಹೆಚ್ಚು ಹೆಸರುವಾಸಿಯಾಗಿದೆ ಎಂಬುದು ತಿಳಿದುಬರುತ್ತದೆ.

**ವಿಜಯನಗರದ ಅರಸರು** – ಹೊಯ್ಸಳ ದೊರೆಗಳ ಆಳ್ವಿಕೆಯು ಮುಗಿದ ಅನಂತರದಲ್ಲಿ ಅಸ್ಥಿತ್ವಕ್ಕೆ ಬಂದಂತಹ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ ಹೊಯ್ಸಳ ಮೂರನೆಯ ಬಲ್ಲಾಳ ಮತ್ತು ವಿಜಯನಗರದ ಸಂಗಮ ವಂಶದ ಹರಿಹರನಿಗೆ ಸಂಬಂಧವಿದ್ದ ವಿಷಯ ಈಗಾಗಲೇ ಸ್ಪಷ್ಟವಾಗಿದೆ. ಹರಿಹರನ ಮಗಳನ್ನು ಹೊಯ್ಸಳ ಬಲ್ಲಾಳನ ಸಂಬಂಧಿ ಬಲ್ಲಪ್ಪ ದಣ್ಣಾಯಕ ಮದುವೆಯಾಗಿದ್ದನು ಎಂಬುದು ತಿಳಿದುಬರುತ್ತದೆ. ಈ ಮೊದಲಿಗೆ ಬಲ್ಲಾಳನ ಅಧೀನನಾಗಿ ಆಳುತ್ತಿದ್ದ ಹರಿಹರನೇ ಸಂಗಮ ವಂಶದ ಮೂಲಪುರುಷ ಎಂದು ತಿಳಿಯಲಾಗಿದೆ. ಹರಿಹರನು ತನ್ನ ತಮ್ಮಂದಿರಲ್ಲಿ ಒಬ್ಬನಾದ ಮಾರಪನನ್ನು 'ಮಲೆ ರಾಜ್ಯ' ಎಂದು ಕರೆಯಲಾಗುತ್ತಿದ್ದ ಆರಗ ರಾಜ್ಯದ ರಾಜ್ಯಪಾಲನನ್ನಾಗಿ ನೇಮಿಸಿದ. ಆರಗವೇ ಅವನ ರಾಜಧಾನಿಯಾಯಿತು. ಚಟ್ಟಕೊಡಗಿ ಗ್ರಾಮದ ಜವುಗುಭೂಮಿಯಲ್ಲುರುವ ಕ್ರಿ.ಶ. ನವೆಂಬರ್ 16, 1346ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ–145ರ ಪ್ರಕಾರ; ಶ್ರೀವೀರ ಹರಿಯಪ್ಪ ಒಡೆಯನನ್ನು ಶ್ರೀಮನ್ಮಹಾಮಂಡಲೇಶ್ವರ ಪೂರ್ವ–ಪಶ್ಚಿಮ–ದಕ್ಷಿಣ ಸಮುದ್ರಾಧಿಪತಿ ಎಂದೇ ಸಂಬೋಧಿಸಿದೆ. ಇದು ನರಸಿಂಹ ದೇವರಿಗೆ ನೈವೇದ್ಯಾದಿ ಸೇವೆಗಾಗಿ ಏಳು ಗದ್ಯಾಣಗಳನ್ನು ಮತ್ತು ಭೂ ದಾನ ನೀಡಿರುವ ಬಗೆಗೆ ವಿವರವನ್ನು ಉಲೇಖಿಸುತ್ತದೆ. ವಿರೂಪಾಪುರ ಗ್ರಾಮದ ಕೊಲ್ಲಾಭಟ್ಟರಲ್ಲಿದ್ದ ಕ್ರಿ.ಶ. ಜೂನ್ 11, 1394ರಲ್ಲಿ ರಚಿಸಿರುವ ಈ ತಾಮ್ರ ಶಾಸನ ಸಂಖ್ಯೆ–221ರ ಪ್ರಕಾರ; ಈ ಶಾಸನವು ನಾಗರಿ ಭಾಷೆಯಲ್ಲಿ ರಚಿಸಿರುವ ಎರಡನೆ ಹರಿಹರ, ಬುಕ್ಕನ ಮಗ ಮತ್ತು ಗೌರಂಬಿಕಾ ಇನ್ನಿತರ ವಿಜಯನಗರ ಅರಸರ ವಂಶಾವಳಿಯ ಬಗೆಗೆ ಉಲೇಖಿಸುತ್ತದೆ. ಇದು ಯದುಕುಲದಲ್ಲಿ ಜನಿಸಿದ ಸಂಗಮ ಭೂಪಾಲನಿಗೆ ಐದು ಜನ ಗಂಡುಮಕ್ಕಳು. ಅವರೆಂದರೆ ಹರಿಹರ ಕಂಪರಾಯ, ಬುಕ್ಕ, ಮಾರಪ ಹಾಗೂ

ಮುದ್ದಪ. ಇವರಲ್ಲಿ ಪಾಂಡವರಲ್ಲಿನ ಅರ್ಜುನನಂತೆ ಪ್ರಖ್ಯಾತನಾದವನು ಬುಕ್ಕ. ಬಕ್ಕನನ್ನು ಇಲ್ಲಿ ಆಡಂಬರದ ಮಾತುಗಳಲ್ಲಿ ಹೊಗಳಲಾಗಿದೆ.

ಕವಲೇದುರ್ಗದ ಕೋಟೆಯಲ್ಲಿ ಕಾಶೀಶ್ವರ ದೇವಾಲಯದ ಮುಂದಿರುವ ದೊಡ್ಡ ಬಂಡೆಯ ಮೇಲೆ ದೊರೆಕಿರುವ ಸರಿಸುಮಾರು ಕ್ರಿ.ಶ.1362ರಲ್ಲಿ ಬರೆಸಿರುವ ಈ ಶಾಸನ ಸಂಖ್ಯೆ–36ರ ಪ್ರಕಾರ: ಬುಕ್ಕರಾಯನ ಮಗ ವಿರೂಪಾಕ್ಷರಾಯನು ಆರಗ ರಾಜ್ಯವನ್ನು ಆಳುತ್ತಿದ್ದಂತೆ ತಿಳಿದಿದೆ. ಹಾಗೆಯೇ ವೀರಬಕ್ಕಣವೊಡೆಯನ ಮಗನಾದ ವಂದಗಿರಿ ವಿರುಪಣ್ಣವೊಡೆಯನು ಇದೇ ಕಾಲಘಟ್ಟದಲ್ಲಿ ಅರಗ ರಾಜ್ಯದ ಪಾಲಕನಾಗಿದ್ದನು ಎಂದು ದಾಖಲಿಸಿದೆ. ಬೆಟ್ಟಮಕ್ಕಿಯ ಮಠದಗದ್ದೆಯಲ್ಲಿರುವ ಹುಟ್ಟುಗುಂಡಿನ ಮೇಲೆ ಕ್ರಿ.ಶ.ಡಿಸೆಂಬರ್, 1362 ರಿಂದ ಜನವರಿ, 1393ರಲ್ಲಿನ ಈ ಶಾಸನ ಸಂಖ್ಯೆ–187ರ ಪ್ರಕಾರ; ಬುಕ್ಕರಾಜನನ್ನು ಪ್ರತಾಪ ಚಕ್ರೇಶ್ವರ ಎಂದು ಸಂಬೋಧಿಸಲಾಗಿದೆ. ಅವನ ಮಗನಾದ ವಿರುಪಣವೊಡೆಯನು ಈತನ ಹೆಸರಿನಲ್ಲಿ ವಿರೂಪಾಕ್ಷಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ ಅಲ್ಲಿ ಬ್ರಾಹ್ಮಣರಿಗೆ ಭೂಮಿಯನ್ನು, ಕೂಡ ದಾನವಾಗಿ ನೀಡಿದನು. ತಿಳಿಸುತ್ತದೆ. ಭೋಗಾರಕೊಪ್ಪದ ಮಂಗರಸಕೊಡಿಗೆ ಕಾಡಿನಲ್ಲಿರುವ ಕ್ರಿ.ಶ.ಆಗಸ್ಟ್ 17, 1384ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–195ರಲ್ಲಿ ಮಾಧವ ಮಂತ್ರಿ ಮತ್ತು ವೀರಬುಕ್ಕರನ್ನು ಉಲ್ಲೇಖಿಸುತ್ತದೆ. ಈತ ಮೊದಲು ಯುವರಾಜ ಮಾರಪನ ಮಂತ್ರಿಯಾಗಿದ್ದ ಅನಂತರ ಬುಕ್ಕನ ಹಾಗೂ ಎರಡನೆಯ ಹರಿಹರನ ಕೈಕೆಳಗೆ ಬನವಾಸಿಯ ರಾಜ್ಯಪಾಲನಾಗಿದ್ದನು ಹಾಗೂ 'ಸೂತಸಂಹಿತೆ'ಯ ಮೇಲಿನ ವ್ಯಾಖ್ಯಾನ ರಚನಕಾರನಾಗಿದ್ದ ಈ ಮಾಧವಮಂತ್ರಿಯೂ ಮಲೆ ರಾಜ್ಯದಲ್ಲಿದ್ದ.

ವಿರೂಪಾಪುರದ ಕೊಲ್ಲಾಭಟ್ಟರಲ್ಲಿದ್ದ ಸರಿಸುಮಾರು ಕ್ರಿ.ಶ. ಜೂನ್ 11, 1394ರಲ್ಲಿ ಬರೆಸಿರುವ ಈ ತಾಮ್ರ ಶಾಸನ ಸಂಖ್ಯೆ–221ರಲ್ಲಿ ಎರಡನೆ ಹರಿಹರನ ಕಾಲಘಟ್ಟಕ್ಕೆ ಸೇರಿದ್ದು, ಇದು ನಾಗರಿ ಲಿಪಿಯಲ್ಲದೆ. ಹಾಗೆಯೇ, ಇದು ಹರಿಹರನು ಬುಕ್ಕರಾಯ ಮತ್ತು ಗೌರಾಂಬಿಕೆಯರ ಮಗನು ಎಂಬುದನ್ನು, ಇವನು ಶ್ರೀರಂಗಪಟ್ಟಣ ರಾಜ್ಯಕ್ಕೆ ಸೇರಿದ ತುಂಗಭದ್ರ ದೇಶದ ವಿರೂಪಾಪುರವನ್ನು ಅದರ ಉಪಗ್ರಾಮಗಳ ಸಹಿತ ವಿರೂಪಾಕ್ಷನ ಸನ್ನಿಧಿಯಲ್ಲಿ ವಿವಿಧ ವೃತ್ತಿಯ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ಸಹ ಉಲ್ಲೇಖಿಸಿರುತ್ತದೆ. ಬಿಕ್ಕಹಳ್ಳಿಯ ಜಮೀನೊಂದರಲ್ಲಿರುವ ಸರಿಸುಮಾರು ಕ್ರಿ.ಶ. ಫೆಬ್ರವರಿ 1, 1401ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ–183ರಲ್ಲಿ ವಿಜಯ ನಗರದ ಎರಡನೆಯ ಹರಿಹರನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಹಾಗೆಯೇ, ಜನ್ನರಸ ಒಡೆಯ ಆರಗ ರಾಜ್ಯವನ್ನು ಪಾಲಿಸುತ್ತಿದ್ದವನು. ಬಿಕ್ಕಹಳ್ಳಿಯ ಭೂಮಿಯನ್ನು ಬೊಮ್ಮೆಗಡೆಗೆ ಮಾರಾಟ ಮಾಡಲಾಗಿತ್ತು. ಆದರೆ, ದಾಮೋದರ ನಾಯಕನ ಮಗ ಕೇಸಪ್ಪನಿಗೆ ಬಿಕ್ಕಹಳ್ಳಿಯಲ್ಲಿ ನೀಡಿದ ಭೂಮಿ ವ್ಯವಹಾರದ ಬಗೆಗಿನ ಕ್ರಯಪತ್ರ ಇದಾಗಿದೆ. ಇದನ್ನು ಸಿಂಗಣ್ಣ ನಾಡ –

ಸೆನಬೋವ ಎಂಬುವನ್ನು ಈ ದಾಖಲೆಯನ್ನು ಬರೆದಿದ್ದಾರೆ. ಇದು ಕೆಲವು ವಾರಗಳ ಅನಂತರ ಇದೇ ರಾಜ್ಯಪಾಲನು ತೀರ್ಥಮತ್ತೂರು ಮಠದ ಜ್ಞಾನೇಂದ್ರ ಭಾರತಿಗಳ ಯಿತಿಭಿಕ್ಷೆಗಾಗಿ ದೊರೆ ಎರಡನೆಯ ಹರಿಹರನು ನೀಡಿದ ದಾನವನ್ನು ನಿರೂಪಿಸುವ ಶಾಸನವನ್ನು ಬರೆಸಿದನು. ಆ ಗುರುವಿಗೆ ನಾಡವರೂ ದಾನ ನೀಡಿರುವುದು ದಾಖಲಾಗಿರುತ್ತದೆ.

ಮುಕ್ತಹರಿಹರಪುರದ ಹರಿಹರೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಸರಿಸುಮಾರು ಕ್ರಿ.ಶ. ಸೆಪ್ಟೆಂಬರ್ 15, 1404ರಲ್ಲಿ ಬರಸಿರುವ ಈ ಕಲ್ಲು ಶಾಸನ ಸಂಖ್ಯೆ–205ರಲ್ಲಿ ಇಮ್ಮಡಿ ಹರಿಹರ ಮತ್ತು ಅವನ ಮಂತ್ರಿ ವಿಠ್ಠಣ್ಣನನ್ನು ಪ್ರಶಂಸಿಸುವ ವಿವರವಿದೆ. ಹಾಗೆಯೇ ಇದೇ ಎರಡನೆಯ ಹರಿಹರನಿಗೆ ನಿರ್ವಾಣ ಪ್ರಾಪ್ತಿಯಾದುದನ್ನು ಕೂಡ ತಿಳಿಸುತ್ತದೆ. ಇದೇ ಕಾಲಘಟ್ಟದಲ್ಲಿ ವಿಠ್ಠಣ್ಣವೊಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಆವಾಗ ಈತನು ಅರಸ ಎರಡನೆ ಹರಿಹರನ ನೆನಪಿನಲ್ಲಿ ಮುಕ್ತ ಹರಿಹರಪುರ ಅಗ್ರಹಾರವನ್ನು ಸ್ಥಾಪಿಸಿದನು ಎಂಬುದಾಗಿ ತಿಳಿಸುತ್ತದೆ. ಸೂರಳಿ ಗ್ರಾಮದಲ್ಲಿರುವ ಸರಿಸುಮಾರು ಕ್ರಿ.ಶ ಜೂನ್ 8, 1408ರಲ್ಲಿ ರಚಿಸಿರುವ ಶಾಸನ ಸಂಖ್ಯೆ–224ರ ಪ್ರಕಾರ; ವಿಜಯನಗರದ ಅರಸ ಒಂದನೆಯ ದೇವರಾಯನ ಬಗೆಗೆ, ಇದೇ ಕಾಲಘಟ್ಟದಲ್ಲಿ ಆರಗದ ಸಮಸ್ತ ಗೌಡ ಪ್ರಜೆಗಳಿಗೆ ಸುರಲಿ ಗ್ರಾಮವನ್ನು ನಾಗಸಮುದ್ರ ಅಗ್ರಹಾರವನ್ನಾಗಿ ರೂಪಿಸಿ ದಾನವಾಗಿ ನೀಡಿದರು ಎಂಬುದನ್ನು ಉಲ್ಲೇಖಿಸುತ್ತದೆ. ತೀರ್ಥಮುತ್ತೂರು ಮಠದ ಅಂಗಳದಲ್ಲಿರುವ ಸರಿಸುಮಾರು ಕ್ರಿ.ಶ. ಆಗಸ್ಟ್ 3, 1421ರಲ್ಲಿ ಬರೆಸಿರುವ ಶಾಸನ ಸಂಖ್ಯೆ–148ರ ಇದು ನಾಗರಿ ಲಿಪಿಯಲ್ಲಿದ್ದು, ವಿಜಯನಗರದ ಅರಸನಾದ ಒಂದನೆಯ ದೇವರಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಹಾಗೆಯೆ, ರಾಯದೇವನ ಮಗ ಬೊಮ್ಮಣ್ಣ, ಆತನ ಮಗ ಶ್ರೀಗಿರಿನಾಥನು ಅರಗ ವೆಂನ್ತೆಯ ಉಸ್ತುವಾರಿಯನ್ನು ವಹಿಸಿಸಿದ್ದನು ಎಂಬುದರ ಬಗೆಗೆ ವಿವರವನ್ನು ನೀಡುತ್ತದೆ.

ತೀರ್ಥಹಳ್ಳಿ ಕೇಂದ್ರೀಯ ಪ್ರದೇಶದ ರಾಮಚಂದ್ರಾಪುರದ ಪುತ್ತಿಗೆ ಮಠದಲ್ಲಿದ್ದ ಸರಿಸುಮಾರು ಕ್ರಿ.ಶ. ಏಪ್ರಿಲ್ 29, 1463ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–155ರ ಪ್ರಕಾರ; ಇದು ನಾಗರಿ ಲಿಪಿಯಲ್ಲಿದ್ದು, ವಿಜಯನಗರದ ಅಸರನಾಗಿರುವಂತಹ ಇಮ್ಮಡಿ ದೇವರಾಯ ಎಂದು ಕರೆಸಿಕೊಂಡ ಮಲ್ಲಿಕಾರ್ಜುನನ ಕಾಲಘಟ್ಟಕ್ಕೆ ಸೇರಿರುತ್ತದೆ ಎಂಬುದು ತಿಳಿದುಬರುತ್ತದೆ. ಹಾಗೆಯೆ, ಇದು ಮಲ್ಲಿಕಾರ್ಜುನ ಅವರನ್ನು ಒಳಗೊಂಡಂತೆಯೇ ವಿಜಯನಗರ ಅರಸರ ವಂಶಾವಳಿಯನ್ನು ತಿಳಿಸುತ್ತದೆ ಹಾಗೂ ಆವಾಗ ಶ್ರೀಗಿರಿನಾಥನ ಮಗ ದೇವಪ್ಪ ದಂಡನಾಥನಿಗೆ ಗಜಬೇಟೆ ದೇವರಾಯಪುರವೆಂಬ ಪ್ರತಿನಾಮ ಪಡೆದಿದ್ದ ಸರಬಳಿಗೆ ಗ್ರಾಮವನ್ನು ಅದರ ಉಪಗ್ರಾಮಗಳನ್ನು ದಾನವಾಗಿ ನೀಡಿರುವುದು. ಇದೇ ಕಾಲಘಟ್ಟದಲ್ಲಿ ಈತನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಈ ದಾನಕ್ಕೆ ಕಾರಣ ತನ್ನ ಮಗನಿಗೆ

ದೇವರಾಯನೆಂದು ನಾಮಕರಣೋತ್ಸವ ಮಾಡಿದನು. ಗ್ರಾಮವನ್ನು ಸ್ವೀಕರಿಸಿದ ದೇವಪ್ಪನು ಅದನ್ನು ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣರಿಗೆ ದಾನ ನೀಡಿದನು ಎಂಬುದು ಉಲ್ಲೇಖಿಸುತ್ತದೆ. ಈ ಶಾಸನವು ಒಂದನೆಯ ಹಲಗೆಯ ಹಿಂಭಾಗ, ಎರಡನೆಯ ಹಲಗೆಯ ಮುಂಭಾಗ, ಎರಡನೆಯ ಹಲಗೆಯ ಹಿಂಭಾಗ, ಮೂರನೆಯ ಹಲಗೆಯ ಮುಂಭಾಗ, ಮೂರನೆಯ ಹಲಗೆಯ ಹಿಂಭಾಗ, ನಾಲ್ಕನೆಯ ಹಲಗೆಯ ಮುಂಭಾಗ, ನಾಲ್ಕನೆಯ ಹಲಗೆಯ ಹಿಂಭಾಗ, ಐದನೆಯ ಹಲಗೆಯ ಮುಂಭಾಗ ಹೀಗೆ ವಿಭಾಗಿಸಿಕೊಂಡು 162 ಸಾಲುಗಳಿಂದ ರಚಿತವಾಗಿರುತ್ತದೆ ಎಂದು ಹೇಳಬಹುದು.

ಆರಗ ಗ್ರಾಮದ ವೀರಭದ್ರ ದೇವಸ್ಥಾನದ ಪ್ರಾಕಾರದಲ್ಲಿರುವ ಸರಿಸುಮಾರು ಕ್ರಿ.ಶ. ಸೆಪ್ಟೆಂಬರ್ 26, 1352ರಲ್ಲಿ ಬರೆಸಿರುವ ಈ ವೀರಗಲ್ಲು ಶಾಸನ ಸಂಖ್ಯೆ–24ರಲ್ಲಿ ವಿಜಯನಗರದ ಅರಸರಾದ ಒಂದನೆಯ ಹರಿಹರನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಕಣಿವೆಯ ಕಲ್ಲುಬಸ್ತಿಯ ಒಳಗಿದ್ದ ಸರಿಸುಮಾರು ಕ್ರಿ.ಶ ಜನವರಿ 21, 1363ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–29ರಲ್ಲಿ ವಿಜಯನಗರದ ಅರಸ ಬುಕ್ಕನ ಆಳ್ವಿಕೆಯ ಕಾಲಘಟ್ಟವನ್ನು ಸೂಚಿಸುತ್ತದೆ. ಹಾಗೆಯೇ, ವಿರೂಪಣ್ಣ ವಡೆಯ ಎಂಬುವನು ಮಲೆ ರಾಜ್ಯದಲ್ಲಿ ಆಡಳಿತಗಾರನಾಗಿದ್ದನು ಎಂಬುದನ್ನು ಉಲ್ಲೇಖಿಸುತ್ತದೆ.

ಆರಗ ಗ್ರಾಮದ ವೀರಭದ್ರ ದೇವಸ್ಥಾನದ ಒಳಮಂಟಪ ದ್ವಾರದ ಎಡಭಾಗದ ಗೋಡೆಯಲ್ಲಿರುವ ಸರಿಸುಮಾರು ಕ್ರಿ.ಶ.ಮೇ 18, 1377ರ ಶಾಸನ ಸಂಖ್ಯೆ–23ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಬುಕ್ಕರಾಯನ ಮಗನಾದ ಎರಡನೆಯ ಹರಿಹರನು ಆಳುತ್ತಿರುವಾಗ; ರಾಮದೇವನ ಮಗಳು ಪದುಮಲದೇವಿ ಮತ್ತು ಇದೇ ಪದುಮಲದೇವಿಯ ಮಗ ಸತ್ರೀವೀರಬುಕ್ಕರಾಯನ ಕೊಮಾರ ವೇದಗಿರಿ ವಿರೂಪರಾಯನ ರಾಣಿವಾಸ ಮಂಜಾದೇವಿ ಆರಗದ ಶ್ರೀವೀರಭದ್ರದೇವರಿಗೆ ಸೇವೆಗೆ ದಾನನೀಡಿರುವುದು ಕಂಡುಬರುತ್ತದೆ.

ನಿಟ್ಟೂರು ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಬಳಿ ನೆಟ್ಟಿರುವ ಸರಿಸುಮಾರು ಕ್ರಿ.ಶ.ಅಕ್ಟೋಬರ್ 12, 1379ರ ಕಲ್ಲು ಶಾಸನ ಸಂಖ್ಯೆ–178 ವಿಜಯನಗರ ಸಾಮ್ರಾಜ್ಯದ ಅರಸನಾಗಿದ್ದ ವೀರ ಮುದಗಿರಿ ವಿರೂಪಣ್ಣ ಒಡೆಯನ ಮಗನಾದ ಬುಕ್ಕರಾಯನು ಆಳುತ್ತಿರುವಾಗ; ಹೊಂಬುಚ್ಚನಾಡು ನಿಟ್ಟೂರ ಗ್ರಾಮಕ್ಕೆ ಸಲುವ ಎರಡು ಮಂದುನಾಡು ಮೂವತ್ತರೂಳಗಳ ಗಉಡುಪ್ರಜೆಗಳು ಮುನಿಊರ ಮೇಚಗೆಡೆ ಬೂಚಗೆಡೆ ಬೊಮ್ಮಣ್ಣ ಮೇಧಾವಿ ಚೀಲಪ್ಪ ಬೋಳಗೆಡೆ ಕಲ್ಲಹಳ್ಳಿಯ ಸಿರಿಯಮಗೆಡೆ ಬೂಚಗೆಡೆ ರಾಮಹುಗುಡಿಯ ಬೊಮ್ಮಣ್ಣ ಹೊಂನಗೆಡೆ ನಾಗರಹಳಿಯ ಭೂಮಿಯನ್ನು ದಾಯಾದಾನುಮತದಿಂದ ಕೊಟ್ಟಿರುವುದು ಕಂಡುಬರುತ್ತದೆ.

ಕುರುವಳ್ಳಿ ಗ್ರಾಮದ ಗದ್ದೆಯೊಂದರಲ್ಲಿರುವ ಹುಟ್ಟುಗುಂಡಿನ ಮೇಲೆ ಇರುವ ಸರಿಸುಮಾರು ಕ್ರಿ.ಶ. ಸೆಪ್ಟೆಂಬರ್ 23, 1387ರ ಶಾಸನ ಸಂಖ್ಯೆ–120ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಬುಕ್ಕರಾಯನ ಮಗನಾದ ಎರಡನೆಯ ಹರಿಹರನು ಆಳುತ್ತಿದ್ದನು. ಆವಾಗ ಸೋಮಣ್ಣ ಒಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿರುವಾಗ; ಅಲ್ಲಿನ ಜನರಿಗೆ ದಾನವನ್ನು ಧಾರಾಪೂರ್ವಕವಾಗಿ ನೀಡುತ್ತಿದ್ದರುವುದನು ಮುಂದುವರೆಸಿರುವ ಬಗೆಗೆ ಉಲ್ಲೇಖವಿದೆ. ಮಾಕೋಡು ಗ್ರಾಮಸ್ಥರೊಬ್ಬರ ಮನೆಯಬಳಿ ಗದ್ದೆಯಲ್ಲಿ ಬಿದ್ದಿರುವ ಸರಿಸುಮಾರು ಕ್ರಿ.ಶ. ಜೂನ್ 21, 1396ರ ಕಲ್ಲು ಶಾಸನ ಸಂಖ್ಯೆ–204ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಎರಡನೆಯ ಹರಿಹರನು ಆಳುತ್ತಿದ್ದನು. ಆವಾಗ; ಆರಗ ರಾಜ್ಯವನ್ನು ಪಾಲಿಸುತ್ತಿದ್ದಂತಹ ಮಯಾಣ್ಣನ ಮಗನಾದ ವಿರೂಪಣ್ಣನು ಅಲ್ಲಿನ ಸಮಸ್ತಮಹಾಪ್ರಜೆಗಳಿಗೆ, ಗಾವಡುಪ್ರಜೆಗಳಿಗೆ ಮತ್ತು ಇತರರಿಗೆ ಭೂಮಿಗಳನ್ನು ದಾನಧಾರಾಪೂರ್ವಕವಾಗಿ ಕೊಟ್ಟಿರುವ ಬಗೆಗೆ ವಿವರವಿದೆ. ವೈದ್ಯರಕೊಪ್ಪ ಗ್ರಾಮದ ಗದ್ದೆಯೊಂದರಲ್ಲಿ ನೆಟ್ಟಿರುವ ಸರಿಸುಮಾರು ಕ್ರಿ.ಶ.ಸೆಪ್ಟೆಂಬರ್ 10, 1397ರ ಕಲ್ಲು ಶಾಸನ ಸಂಖ್ಯೆ–222ರಲ್ಲಿ ನಾಗರಿ ಲಕ್ಷಣಗಳನ್ನು ಮತ್ತು ಕನ್ನಡ ಭಾಷೆಯಲ್ಲಿ ಎಂದು, ವಿಜಯನಗರ ಸಾಮ್ರಾಜ್ಯವನ್ನು ಎರಡನೆಯ ಹರಿಹರನು ಆಳುತ್ತಿದ್ದನು. ಆವಾಗ; ಬೈರಪ್ಪಹೆಗ್ಗಡೆಯು ದಾಯಾದಾನುಮತದಿಂದ ವೊಡಂಬಟ್ಟು ಕೊಟ್ಟ ಭೂಮಿಯ ಕ್ರಯದಾನವನ್ನು ಉಲ್ಲೇಖಿಸಿರುತ್ತದೆ.

ಆರಗ ಗ್ರಾಮದ ಕಲಿನಾಥ ದೇವಸ್ಥಾನದ ಪ್ರಾಕಾರದಲ್ಲಿ ದಕ್ಷಿಣಕಡೆ ಗೋಡೆಗೆ ನೆಟ್ಟಿರುವ ಸರಿಸುಮಾರು ಕ್ರಿ.ಶ.ಫೆಬ್ರವರಿ 27, 1404ರ ಶಾಸನ ಸಂಖ್ಯೆ–16 ವಿಜಯನಗರ ಸಾಮ್ರಾಜ್ಯವನ್ನು ಎರಡನೆಯ ಹರಿಹರನು ಆಳುತ್ತಿದ್ದನು. ಆವಾಗ ಆಗರ ರಾಜ್ಯವನ್ನು ವಿಠಣ್ಣವೊಡೆಯನು ಪಾಲಿಸುತ್ತಿದ್ದನು. ಇದೇ ಆರಗದ ಮೂಲಸ್ಥಾನ ಶ್ರೀಕಲ್ಲಿನಾಥ ದೇವರ ಅಮ್ರುತಪಡಿಗೆ ಮುದುವಂಕನಾಡಿನ ಮೇಲುಭಾಗದ ಒಳಗಿರುವ ಬೊಂದಿಯದ ಗ್ರಾಮದ ಹನ್ನೆರಡು ಹೊನ್ನು ಗುತ್ತಿಗೆಯ ಹದಿನೆಂಟು ಕಂಪಣದ ನಾಡ ಮೇಲೆಯ ಮೂರು ಪಟ್ಟಣದ ಈ ಪಟ್ಟಣಕ್ಕೆ ಸಲುವ ಭೂಮಿಯನ್ನು ದಾನಧಾರಾಪೂರ್ವಕವಾಗಿ ಕೊಟ್ಟಿರುವುದು ದಾಖಲಾಗಿದೆ. ಇದೇ ಗ್ರಾಮದ ಮತ್ತೊಂದು ಕಲ್ಲಿನಲ್ಲಿರುವ ಸರಿಸುಮಾರು ಕ್ರಿ.ಶ. ಅಕ್ಟೋಬರ್ 14,1404ರ ಶಾಸನ ಸಂಖ್ಯೆ–17ರಲ್ಲಿ ಆಗರ ರಾಜ್ಯವನ್ನು ವಿರಪ್ಪವೊಡೆಯನು ಪಾಲಿಸುತ್ತಿರುವಾಗ; ಬೊಂದಿಗ್ರಾಮದ ಭೂಮಿಗಳನ್ನು 25 ಹೊನ್ನುಗಳಿಗೆ ಕ್ರಯವಾಗಿ ತೆಗೆದುಕೊಂಡು, ಆ ಭೂಮಿಯನ್ನು ಕಲ್ಲಿನಾಥ ದೇವರ ಅಮುತ್ರಪಡಿಗಾಗಿ ಅಲ್ಲಿನ ಜನರಿಗೆ ದಾನವಾಗಿ ನೀಡಿರುವುದು ಉಲ್ಲೇಖಿತವಾಗಿದೆ. ಇದೇ ಗ್ರಾಮದ ಮತ್ತೊಂದು ಅದೇ ಕಲ್ಲಿನಲ್ಲಿರುವ ಸರಿಸುಮಾರು ಕ್ರಿ.ಶ ಅಕ್ಟೋಬರ್ 14, 1404ರಶಾಸನ ಸಂಖ್ಯೆ–18 ವಿಜಯನಗರ ಸಾಮ್ರಾಜ್ಯವನ್ನು ಬುಕ್ಕನ ಮಗನಾದ ಒಂದನೆಯ ಹರಿಹರನು ಆಳುತುದ್ದನು. ಆವಾಗ ಆರಗ ರಾಜ್ಯವನ್ನು ಬೊಮ್ಮಣ್ಣನ ಮಗನಾದ ವಿಠಣ್ಣನು

ಪಾಲಿಸುತ್ತಿದ್ದನು. ಆವಾಗ ಇದೇ ಕಲ್ಲಿನಾಥ ದೇವರ ಅಮುತ್ರಪಡಿಗಾಗಿ ಬೊಂದಿ ಗ್ರಾಮದ 25 ಹೊನ್ನುಗಳ ನಿಧಾರಿತ ಗುತ್ತಿಗೆಯ ಭೂಮಿಯನ್ನು ದಾನಧಾರಾಪೂರ್ವಕವಾಗಿ ಬಿಟ್ಟುಕೊಟ್ಟಿರುವುದು ತಿಳಿದುಬರುತ್ತದೆ.

ಹೊಸಕೊಪ್ಪ ಊರಿಗೆ ದಕ್ಷಿಣ ಹೊಲವೊಂದರಲ್ಲಿ ನೆಟ್ಟಿರುವ ಸರಿಸುಮಾರು ಕ್ರಿ.ಶ.1404–1405ರ ಕಲ್ಲು ಶಾಸನ ಸಂಖ್ಯೆ–243ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಎರಡನೆಯ ಹರಿಹರನು ಆಳುತ್ತಿದ್ದನು. ಆವಾಗ; ವಿಠ್ಠಪ್ಪ ಒಡೆಯನು ಆರಗ ರಾಜವನ್ನು ಪಾಲಿಸುತ್ತಿರುವಾಗ; ನಾಗಣ್ಣ ಹುಲಿಗಿಲನ ಮಗನಾದ ನಾಗಣ್ಣನು ಆರಗದ ಮೂಲಸ್ಥಾನದ ಕಲ್ಲಿನಾಥ ದೇವರ ಪ್ರಾರ್ಥನೆಗಾಗಿ ಸಮಸ್ತ ನಾಡ ಜನರಿಗೆ ಭೂಮಿಗಳನ್ನು ದಾನಧಾರಾಪೂರ್ವಕವಾಗಿ ಕೊಟ್ಟಿರುವುದು ದಾಖಲೀಕರಣಗೊಂಡಿರುತ್ತದೆ. ಈ ದಾಖಲೆಯನ್ನು ಹೊಂಬಚ್ಚುನಾಡಿನ ಸೇನಾಬೋವ ಮಲ್ಲಪ್ಪ ಎಂಬುವರು ಬರೆದಿರುವುದು ಕೂಡ ಕಂಡುಬರುತ್ತದೆ ಎಂದು ಹೇಳಬಹುದು. ಕೆಸರೆ ಗ್ರಾಮದ ಹಕ್ಕಲಿನಲ್ಲಿರುವ ಸರಿಸುಮಾರು ಕ್ರಿ.ಶ. ಸೆಪ್ಟೆಂಬರ್,1405ರ ಕಲ್ಲು ಶಾಸನ ಸಂಖ್ಯೆ–126ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಬುಕ್ಕರಾಯನು ಆಳುತ್ತಿರುವಾಗ; ಆರಗ ರಾಜ್ಯವನ್ನು ಬ್ರಹ್ಮರಾಜನ ಮಗನಾದ ವಿಠ್ಠಣ್ಣ ಒಡೆಯನು ಪಾಲಿಸುತ್ತಿದ್ದನು. ಆವಾಗ ಭಾರತೀತೀರ್ಥಶ್ರೀಪಾದಂಗಳು ಶೃಂಗೇರಿಯ ತುಂಗಾಭದ್ರಾ ತೀರದ ದೇವರ ಸನ್ನಿದಿಯಲ್ಲಿ ರಾಜ್ಯವಗೆಯ್ವಲ್ಲಿ ಆರಗದವೇಂಠೆಯದ 18 ಕಂಪಣದವೊಳಗಣ ಹೊಂಬುಚ್ಚನಾಡಿನ ಎರಡು ಮುಂದುನಾಡು ಮುನಿಯೂರ ಮಂಚಗವುಡು ಗುಡಿಯ ಬೋಳಪ್ಪ ಮುದ್ದಗೌಡ ಸವಟೆಗಾರ ನೀಲಕಂಠಜೋನಹಳಿ ಹೊಂನಪ್ಪಗಳು ಬಾರಸೂರು ನಾಗಪ್ಪವೊಡೆಯ ಕಾಮಂಣ ಮುಖ್ಯರಾದ ಸಮಸ್ತಗೌಡಪ್ರಜೆಗಳು ಯಜನಯಾಜಧ್ಯಯನ ಅಧ್ಯಾಪನ ದಾನವಾಗಿ ಮಲ್ಲಪ್ಪಗಳು ಶ್ರೀನರಸಿಂಹಭಾರತೀಪುರವಾಗಿ ಅಗ್ರಹಾರವಮಾಡಿಸಿ ವೃತ್ತಿಮಂತರ ವಿವರ ಶೃಂಗೇರಿಯ ಶ್ರೀವಿದ್ಯಾಶಂಕರದೇವ ನೈವೇದ್ಯದ ವೃತ್ತಿ ಒಂದು ವಿಶ್ವಾಮಿತ್ರಗೋತ್ರದ ಸಾಮಶಾಖೆಯ ಕೊಂಗಣ್ಣಉಪಾದ್ಯಾಯ ಮಕ್ಕಳಿಗೆ 175 ಗದ್ಯಾಣದ ಭೂಮಿಯನ್ನು ದಾನಧಾರಾಪೂರ್ವಕವಾಗಿ ನೀಡಿರುವುದರ ಬಗೆಗೆ ವಿವರವಿದೆ.

ಆರಗ ಗ್ರಾಮದ ಬನಶಂಕರೀ ದೇವಸ್ಥಾನದ ಮುಂದೆ ಬಿದ್ದಿರುವ ಸರಿಸುಮಾರು ಕ್ರಿ.ಶ.ಜುಲೈ 8, 1405ರ ಕಲ್ಲು ಶಾಸನ ಸಂಖ್ಯೆ–15ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಎರಡನೆಯ ಹರಿಹರನ ಮಗನಾದ ಒಂದನೆಯ ದೇವರಾಯನು ಆಳುತ್ತಿರುವಾಗ; ಬೊಮ್ಮಣ್ಣ ವೊಡೆಯನ ಮಗನಾದ ವಿಠ್ಠಣ್ಣ ವೊಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಕೃಷ್ಣಭಟ್ಟ ಮತ್ತು ಜಕ್ಕಣ್ಣ, ಬೊಮ್ಮಣ್ಣ ಎಂಬುವರು ಆರಗ ನಗರದ ಹಿರಿಯಂಗಡಿಯಲ್ಲಿ ಶ್ರೀಬನದದೇವಿಯರಿಗೆ ನಿರ್ಮಾಣಮಾಡಿರುವ ದೇವಾಲಯದ ನಿರ್ವಹಣೆಗಾಗಿ

ಆರಗದವೇಂಠೆಯ ಮುದುವಂಕನಾಡಿನ ಒಳಗಣ ಇರುವ ಸಂಕುವಳ್ಳಿಯಲ್ಲಿನ ಭೂಮಿಗಳನ್ನು ದಾನಧಾರಾಪೂರ್ವಕವಾಗಿ ಬಿಟ್ಟುಕೊಟ್ಟಿರುವುದು ಉಲ್ಲೇಖಿತವಾಗಿರುತ್ತದೆ. ಕೆಲವು ವಿವರವು ಹಾನಿಯಾಗಿರುವ ಈ ದಾನಪತ್ರವನ್ನು ಸಿಂಗಣ್ಣ ಎಂಬುವರು ಬರೆದಿರುತ್ತಾರೆ ಎಂಬುದು ಸಹ ತಿಳಿದುಬಂದಿರುತ್ತದೆ.

ಅಲಗವಳ್ಳಿ ಗ್ರಾಮದ ದುರ್ಗೀ ದೇವಸ್ಥಾನದ ಸಮೀಪ ಕಾಡಿನಲ್ಲಿರುವ ಸರಿಸುಮಾರು ಕ್ರಿ.ಶ.15ನೇ ಶತಮಾನದ ಕಲ್ಲು ಶಾಸನ ಸಂಖ್ಯೆ–10 ವಿಜಯನಗರ ಸಾಮ್ರಾಜ್ಯವನ್ನು ಒಂದನೆಯ ದೇವರಾಯನು ಆಳುತ್ತಿದ್ದಾಗ; ಆರಗ ರಾಜ್ಯವನ್ನು ವಿಠ್ಠಣ್ಣವೊಡೆಯನು ಪಾಲಿಸುತ್ತಿದ್ದನು. ಇದೇ ಕಾಲಘಟ್ಟದಲ್ಲಿ ಪಡೆನಿಪಾಡ ಲಿಂಗರಸನ ಮಗನಾದ ವಿರುಣ್ಣನು ಜೋಮ್ಮಾಪುರದ ಆಲುಗವಳಿಯನ್ನೂ, ಕೌರಿಯಭಾಗೆಯನ್ನು ಅಲ್ಲಿನ ಮಹಾಜನಗಳಿಗೆ ದಾನಧಾರಾಪೂರ್ವಕವಾಗಿ ಕೊಟ್ಟ ಭೂಮಿಯ ವಿವರವನ್ನು ದಾಖಲೀಸಿರುತ್ತದೆ.

ಕರಡಿಕೋಡು ಗ್ರಾಮಸ್ಥರೊಬ್ಬರ ತೋಟದ ಬಳಿ ಇರುವ ಸರಿಸುಮಾರು ಕ್ರಿ.ಶ.ಏಪ್ರಿಲ್ 16, 1413ರ ಕಲ್ಲು ಶಾಸನ ಸಂಖ್ಯೆ–34ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸದಾಶಿವರಾಯನು ಆಳುತ್ತಿರುವಾಗ; ಲಿಂಗಣ್ಣ ಒಡೆಯನು ಆರಗ ರಾಜ್ಯದಲ್ಲಿ ಆಡಳಿತವನ್ನು ಮಾಡುತ್ತಿದ್ದನು. ಆವಾಗ; ದೇವರಸರ ಮಕ್ಕಳು ಗೋವಣ್ಣ ಅವರಿಗೆ ಹದಿನೆಂಟು ಸಲಗದ ಭೂಮಿಯನ್ನು 34 ಹೊನ್ನುಗಳ ದರದ ಭೂಮಿಯನ್ನು ದಾನಧಾರಾಪೂರ್ವಕವಾಗಿ ನೀಡಿರುವುದು. ಹಾಗೆಯೇ, ಈ ಪತ್ರವನ್ನು ವೆಂಕಣ್ಣ ನಾಡಸೇನಾಬೋವ ಎಂಬುವನು ಬರೆದಿರುವುದು ಕೂಡ ಉಲ್ಲೇಖಿತಗೊಂಡಿರುತ್ತದೆ. ಗಾಡಿಗ್ಗೆರೆ ಗ್ರಾಮದ ಮನೆಯೊಂದರ ಬಳಿ ನೆಟ್ಟಿರುವ ಸರಿಸುಮಾರು ಕ್ರಿ.ಶ.ಆಗಸ್ಟ್–ಸೆಪ್ಟೆಂಬರ್, 1415ರಲ್ಲಿ ಕಲ್ಲು ಶಾಸನ ಸಂಖ್ಯೆ–139ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಆಳುತ್ತಿದ್ದ ರಾಜರು ಮತ್ತು ಆರಗ ರಾಜ್ಯವನ್ನು ಪಾಲಿಸುತ್ತಿದ್ದವರ ಹೆಸರುಗಳು ಹಾನಿಯಾಗಿರುತ್ತದೆ. ಬಿದಪ್ಪ ಹೆಗ್ಗಡೆ ಮತ್ತು ತಿರಿಕ ಹೆಗ್ಗಡೆ ಅವರು ಸಿದ್ಧಾನಾಥ ಪಂಡಿತನ ಮಗನಾದ ಜನ್ನಪ್ಪ ಮತ್ತು ಮದುವರಸ ಅವರಿಗೆ ಕೊಡುರು – ಗಾಡಿಗ್ಗೆರೆಯ ನಾಲ್ಕು ಸರಹದ್ದಿನ ಮೂವತ್ತು ಖಂಡುಗಳ ಭೂಮಿಗಳನ್ನು ದಾನಧಾರಾಪೂರ್ವಕವಾಗಿ ನೀಡಿರುವುದು ಹಾಗೆಯೇ, ಇದೇ ಭೂಮಿಯನ್ನು 15 ಹಣಗಳ–ಖಂಡುಗದ 45 ವರಹಗಳಿಗೆ ತೆಗೆದುಕೊಂಡಿರುವುದು ಕೂಡ ಉಲ್ಲೇಖಿತವಾಗಿರುತ್ತದೆ.

ಮೇಗರವಳ್ಳಿ ಗ್ರಾಮದ ಲಕ್ಕೀಬಿಳಲಿನಲ್ಲಿರುವ ಸರಿಸುಮಾರು ಕ್ರಿ.ಶ.ಆಗಸ್ಟ್ 8, 1417ರ ಕಲ್ಲು ಶಾಸನ ಸಂಖ್ಯೆ–212ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಒಂದನೆಯ ದೇವರಾಯನು ಆಳುತ್ತಿದ್ದನು. ಇದೇ ಕಾಲಘಟ್ಟದಲ್ಲಿ ವಿಠ್ಠಪ್ಪವೊಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿರುವಾಗ; ಮುಂಬೆಲೆ ಮತ್ತು ಲೋಕುವಳ್ಳಿಗಳಲ್ಲಿನ ಭೂಮಿಯನ್ನು 42 ಹೊನ್ನು ಮತ್ತು 5 ಪಣಗಳಿಗೆ ಮಾರಾಟ ಮಾಡಲಾಗಿರುತ್ತದೆ.

ಈ ಹಣವನ್ನು ವಿರೂಪಾಕ್ಷ ದೇವರ ಪ್ರಾರ್ಥನೆಗಾಗಿ ಆರಗವೇಂಠೆಯ ಸಾಗಳಿಗೆನಾಡಿನ ಒಳಗಿರುವ ಮದುವಳಿಗೆಯ ಮೇಗರವಳ್ಳಿಯ ಮಹಾಜನರಿಗೆ ದಾನಧಾರಾಪೂರ್ವಕವಾಗಿ ನೀಡಲಾಗಿರುತ್ತದೆ. ಈ ದಾನಧಾರಾಪೂರ್ವಕ ಪತ್ರವನ್ನು ಸೇನಬೋವ ಬೊಮ್ಮರಸನು ಬರೆದಿರುವುದು ಕಂಡುಬರುತ್ತದೆ. ಇದೇ ಗ್ರಾಮದ ತೀರ್ಥಹಳ್ಳಿಗೆ ಹೋಗುವ ರಸ್ತೆಯ ಬಳಿ ಕಾಡಿನಲ್ಲಿರುವ ಸರಿಸುಮಾರು ಕ್ರಿ.ಶ.ಆಗಸ್ಟ್ 17, 1417ರ ಮಾಸ್ತಿ ಕಲ್ಲು ಶಾಸನ ಸಂಖ್ಯೆ–213ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಅದೇ, ಒಂದನೆಯ ದೇವರಾಯನು ಆಳುತ್ತಿರುವಾಗ; ಇದೇ ಕಾಲಘಟ್ಟದಲ್ಲಿ ರಾಯಪ್ಪ ವಿಠ್ಠಣ್ಣವೊಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಆವಾಗ ಮೇಗರವಳ್ಳಿಯಲ್ಲಿ ನಾಗಕ್ಕ ಎಂಬುವರು ಸತಿಸಹಗಮನಕ್ಕೆ ಒಳಗಾಗಿ ಮರಣ ಹೊಂದಿರುವ ಕಾರಣಕ್ಕಾಗಿ ಮಹಾಸತಿಕಲ್ಲನ್ನು ನೆಡಲಾಗಿರುತ್ತದೆ ಎಂಬುದು ತಿಳಿದುಬಂದಿರುತ್ತದೆ.

ಕೋಣಂದೂರು ಗ್ರಾಮದ ಮಾವಿನಮರದ ಕೆಳಗೆ ಬಿದ್ದಿರುವ ಸರಿಸುಮಾರು ಕ್ರಿ.ಶ.ಅಕ್ಟೋಬರ್ 23, 1419ರ ಎರಡನೆಯ ಕಲ್ಲು ಶಾಸನ ಸಂಖ್ಯೆ–133ರಲ್ಲಿ ಕೋಣಂದೂರು ಮತ್ತು ಹೊಂಬುಜ್ಜ ಎಂಬ ಸ್ಥಳಗಳು ಮತ್ತು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಮೂರನೆಯ ಬುಕ್ಕರಾಯ ಮತ್ತು ವಿಠ್ಠಣ ಒಡೆಯರ ಹೆಸರುಗಳು ಉಲ್ಲೇಖವಿರುವ 15ನೇ ಶತಮಾನದ ಹಾನಿಯಾಗಿರುವ ಒಂದು ಶಾಸನವಾಗಿದೆ ಎಂದು ಹೇಳಬಹುದು. ತೀರ್ಥಹಳ್ಳಿ ಕೇಂದ್ರ ಪ್ರದೇಶದಲ್ಲಿ ರಾಮಚಂದ್ರಾಪುರ ಮಠದ ಮುಂದೆ ನೆಟ್ಟಿರುವ ಸರಿಸುಮಾರು ಕ್ರಿ.ಶ.ಮಾರ್ಚ್ 22, 1422ರ ಎರಡನೆಯ ಕಲ್ಲು ಶಾಸನ ಸಂಖ್ಯೆ–152ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಎರಡನೆಯ ದೇವರಾಯನು ಆಳುತ್ತಿದ್ದನು. ಇದೇ ಕಾಲಘಟ್ಟದಲ್ಲಿ ಸಿರಿಗಿರಿನಾಥದೇವ ಎಂಬುವನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ತೀರ್ಥಹಳ್ಳಿಯ ರಾಮನಾಥದೇವರು ಶ್ರೀನಾರಸಿಂಹದೇವರ ಸನ್ನಿದಿಯಲ್ಲಿ ತುಂಗಭದ್ರಾತೀರದಲ್ಲಿ ಆ ಮಹಾಜನರ ಸಮುಖದಲ್ಲಿ ನಿಡುವಲನಾಡಿನ ಒಳಗಿನ ಬುಕ್ಕರಾಜಪುರದ ಅಗ್ರಹಾರಕ್ಕೆ ಸಲುವ ಕಾಲುವಳ್ಳಿ 140 ಹೊನ್ನಿನ ಭೂಮಿಯನು ಕ್ರಮದಾನಧಾರಾಪೂರ್ವಕವಾಗಿ ನೀಡಿರುವುದು ಉಲ್ಲೇಖವಿದೆ.

ಆರಗ ಗ್ರಾಮದ ಅಖಂಡೇಶ್ವರ ದೇವಸ್ಥಾನದ ಮುಂದೆ ಬಿದ್ದಿರುವ ಸರಿಸುಮಾರು ಕ್ರಿ.ಶ. ಜನವರಿ 31, 1424ರ ಕಲ್ಲು ಶಾಸನ ಸಂಖ್ಯೆ–21ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಒಂದನೆಯ ಹರಿಹರನ ಮಗನಾದ ಒಂದನೆಯ ದೇವರಾಯನು ಆಳುತ್ತಿದ್ದನು. ಆವಾಗ ಸಿರಿಗಿರಿನಾಥ ಒಡೆಯನು ಅಖಂಡಬ್ರಹ್ಮೇಶ್ವರ ದೇವರ ಅಮ್ರುತಪಡಿಗಾಗಿ ಮತ್ತು ಛತ್ರದ ನಿರ್ವಹಣೆಗಾಗಿ 55 ವರಹಗಳು ಬೆಲೆಯ ಭೂಮಿಯನ್ನು ದಾನಧಾರಾಪೂರ್ವಕವಾಗಿ ಬಿಟ್ಟುಕೊಟ್ಟಿರುವುದು ಕಂಡುಬರುತ್ತದೆ.

ಕುಂತವಲ್ಲಿ ಗ್ರಾಮದ ಶಾಸನಗದ್ದೆ ಎಂಬಲ್ಲಿರುವ ಸರಿಸುಮಾರು ಕ್ರಿ.ಶ.1424– 1425ರ ಕಲ್ಲು ಶಾಸನ ಸಂಖ್ಯೆ–117ರಲ್ಲಿ ನಾಗರಿ ಲಿಪಿಯ ಲಕ್ಷಣಗಳನ್ನು ಹೊಂದಿರುವ ಇದರಲ್ಲಿ ವಿಜಯನಗರದ

ಸಾಮ್ರಾಜ್ಯವನ್ನು ಎರಡನೆಯ ದೇವರಾಯನು ಆಳುತ್ತಿದ್ದನು. ಆವಾಗ; ಈತನ ಅಧೀನದಲ್ಲಿ ರಾಜ್ಯಪಾಲರಾಗಿ ರಾಯಣ್ಣ ಒಡೆಯನು ಇದ್ದನು. ಹಾಗೆಯೇ, ಆರಗ ರಾಜ್ಯವನ್ನು ಹರಿಹರನು ಪಾಲಿಸುತ್ತಿದ್ದನು. ನಾರಾಣದೇವನ ಮಗನಾದ ರಾಮರಸನಿಂದ ಕುಂತವಲ್ಲಿ ಗ್ರಾಮವನ್ನು ಮಾರಾಟಮಾಡಲಾಗಿರುತ್ತದೆ. ತಿರಕ ಹೆಗ್ಗಡೆ ಎಂಬುವರು ಮಾದರಸರಿಂದ ಈ ಭೂಮಿಯಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿರುವುದು ಮತ್ತು ಕ್ರಯದಾನಪತ್ರವನ್ನು ಮಾದರಸ ಎಂಬುವನು ಬರೆದಿರುವುದು ಕಂಡುಬರುತ್ತದೆ.

ಹುಲಕೋಡು ಗ್ರಾಮದ ಮನೆಯೊಂದರ ಮೇಲು ಭಾಗದಲ್ಲಿ ನೆಟ್ಟಿರುವ ಸರಿಸುಮಾರು ಕ್ರಿ.ಶ. ಜನವರಿ,25, 1425ರ ಕಲ್ಲು ಶಾಸನ ಸಂಖ್ಯೆ–235ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಎರಡನೆಯ ದೇವರಾಯನು ಆಳುತ್ತಿರುವಾಗ; ಹುಲಕೋಡು ಸ್ಥಳದಲ್ಲಿ ಹೇಮಾಂಬಿಕಾಪುರ ಎಂಬ ಅಗ್ರಹಾರವನ್ನು ವಿಠ್ಠಪ್ಪ ದಣ್ಣಾಯಕನು ರಚಿಸಿ ಅಲ್ಲಿನ ಮಹಾಜನರಿಗೆ 12 ಭಾಗಗಳಾಗಿ ವಿಭಜಿಸಿ ಹಂಚಿಕೆಮಾಡಲಾಗಿರುವುದು ಉಲ್ಲೇಖಿತವಾಗಿರುತ್ತದೆ. ಈ ದಾಖಲೆಯನ್ನು ದೇವರಾಯನು ಬರೆದಿರುತ್ತಾನೆ. ತೀರ್ಥಹಳ್ಳಿ ಗ್ರಾಮದ ರಾಮಚಂದ್ರಾಪುರ ಮಠದ ಬಾಗಿಲಿಗೆ ಎಡಗಡೆ ಇರುವ ಸರಿಸುಮಾರು ಕ್ರಿ.ಶ.1431–1432ರ ಕಲ್ಲು ಶಾಸನ ಸಂಖ್ಯೆ–151ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಎರಡನೆಯ ದೇವರಾಯನು ಆಳುತ್ತಿದ್ದನು. ಆವಾಗ; ಯಿಶ್ವರಸ್ವರೂಪ ಒಡೆಯರ ಹೆಸರಿನಲ್ಲಿ ಗಂಗಾಧರಪುರಿ ಶ್ರೀಪಾದರು ಧರ್ಮಛತ್ರವೊಂದನ್ನು ನಿರ್ಮಾಣಮಾಡಿದ್ದರು. ಇದರ ನಿರ್ವಹಣೆಗಾಗಿ ವ್ಯವಸ್ಥಾಪಕರು ಮತ್ತು ಇತರರಿಗೆ ಭೂಮಿಯನ್ನು ದಾನಧಾರಾಪೂರ್ವಕವಾಗಿ ಬಿಟ್ಟುಕೊಟ್ಟಿರುವುದು ಉಲ್ಲೇಖಿತವಾಗಿರುತ್ತದೆ. ಕೊಳವಳ್ಳಿ ಗ್ರಾಮದ ಮಾಸ್ತಿ ದೇವಸ್ಥಾನದಲ್ಲಿರುವ ಸರಿಸುಮಾರು ಕ್ರಿ.ಶ. ಡಿಸೆಂಬರ್,10,1432ರ, ವೀರಗಲ್ಲು ಶಾಸನ ಸಂಖ್ಯೆ–129ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಎರಡನೆಯ ದೇವರಾಯನು ಆಳುತ್ತಿದ್ದನು. ಆವಾಗ; ರಾಯಪ್ಪ ಒಡೆಯರ್ ಅವನ ಮಗನಾದ ಸಿರಿಗಿರಿನಾಥ ಒಡೆಯನು ಆರಗವನ್ನು ಪಾಲಿಸುತ್ತಿದ್ದನು. ಸಾತಳಿಗೆಯನಾಡ ಕೊಳವಳಿಗೆ ವಠಾವಳಿಬಂದು ಕಾದಿದಲ್ಲಿ ಆ ಬೊಮ್ಮರಸಹೆಗ್ಗಡೆಯರ ಮಗನಾದ ಪುಟ್ಟಗಡೆದಳವನೂ ಮುರೆದು ಆ ರಣದೊಳಗೆ ಕುಮಾರರಾಮನಾಥನ ಪ್ರತಾಪವಾಗಿ ಆಂಬುಗೂಡಾಗಿ ಸ್ವರ್ಗ್ಗವನೂ ಸೂರೆಕೊಂಡದಕ್ಕೆ ಬೊಮ್ಮರಸಹೆಗ್ಗಡೆಯರೂ ಆಂದಬಯಲಭೂಮಿಯ ಒಳಗೆ ಜೋಯಿಸಸಿಂಗಣ್ಣಗಳಿಗೆ ಆಯಿದು ಸಲಗೆ ಭೂಮಿಯನು ದಾನಧಾರಾಪೂರ್ವಕವಾಗಿ ಕೊಟ್ಟರು ಯಿ ವೀರಗಲ್ಲು ಮಾಡಿದೋವ ಸೂರೋಜನ ಮಗ ವಿರೋಜ ಮಂಗಳಮಹಶ್ರೀ ಶ್ರೀ ಎಂದು ಉಲ್ಲೇಖಿತವಾಗಿದೆ.

ಮೇಗರವಳ್ಳಿ ಗ್ರಾಮಸ್ಥರೊಬ್ಬರ ಮುಂಡವಳ್ಳಿ ತೋಟದಲ್ಲಿರುವ ಸರಿಸುಮಾರು ಕ್ರಿ.ಶ. ಏಪ್ರಿಲ್ 12, 1434ರ ಶಾಸನ ಸಂಖ್ಯೆ–214ರಲ್ಲಿ ನಾಗರಿ ಲಿಪಿಯ ಲಕ್ಷಣಗಳನ್ನು ಹೊಂದಿದೆ. ಇದರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ಎರಡನೆಯ ದೇವರಾಯನು ಆಳುತ್ತಿರುವಾಗ; ಭಾರದ್ವಜಗೋತ್ರದ ರಾಯಪ್ಪ ಒಡೆಯನ ಮಗನಾದ ಸಿರಿಗಿರಿನಾಥ ಒಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿದ್ದ ಕಾಲಘಟ್ಟದಲ್ಲಿ ಆರಗದವೇಂಠ್ಠೇಯದ ಸಾಂತಣಿಗೆಯನಾಡ ಮದವಳಿಗೆಯನಾಡ ಮೇಗರವಳ್ಳಿಯ ಗ್ರಾಮದ ಹೆಗಡೆಯ ಅಳಿಯ ಬೈರನಹೆಗಡೆ ಸಂಕಹೆಗಡೆ ಸಿರಗೊಟ್ಟಹೆಗಡೆ ದೇವನಹೆಗ್ಗಡೆಯ ಜಕ್ಕಸರಹೆಗಡೆಯ ಗಡೆನಾಗಹೆಗಡೆ ಜನ್ನವೆಗಡೆ. . . ವೆಗಡೆ ಲಕಪ್ಪಹೆಗಡೆ ತಾಯಿಯ ಹೆಸರಿನಲ್ಲಿ ದೇವಪ್ಪಹೆಗಡೆ ಇವರೆಲ್ಲರೂ ಮೇಗರವಳ್ಳಿಯಲ್ಲಿ ಸ್ತೂತ್ರ ಗುತ್ತಿಗೆಯ ಭೂಮಿಯನ್ನು ಹರಿಹರಗೋತ್ರದ ವಿಶ್ವನಾಥ ಆಚಾರ್ಯ ಅವರ ಮೊಮ್ಮಗನಾದ ಮಹೇಶ್ವರ ದೀಕ್ಷಿತ ಅವರ ಮಗನಾದ ದೇವಣ ಆಚಾರ್ಯ ಅವರಿಗೆ ದಾನವಾಗಿ ನೀಡಿರುವುದು ಉಲ್ಲೇಖಿತವಾಗಿದೆ. ಈ ದಾನಪತ್ರವನ್ನು ಆರಸಪ ಹೆಗ್ಗಡೆ ಅವರು ಬರೆದಿರುವುದು ಕಂಡುಬರುತ್ತದೆ.

ಕುರುವಳ್ಳಿ ಗ್ರಾಮದ ಉಕ್ಕಡದ ಕೊಟ್ಟಿಗೆ ಬ್ರಹ್ಮನಕಟ್ಟೆಯ ಬಳಿಯಿರುವವ ಕಲ್ಲಿನಲ್ಲಿರುವ ಸರಿಸುಮಾರು ಕ್ರಿ.ಶ.ನವೆಂಬರ್,4, 1437ರ ಕಲ್ಲು ಶಾಸನ ಸಂಖ್ಯೆ–123ರಲ್ಲಿ ದೇವರಾಯನು ವಿಜಯನಗರದ ಸಾಮ್ರಾಜ್ಯವನ್ನು ಆಳುತ್ತಿರುವಾಗ; ಆರಗ ರಾಜ್ಯವನ್ನು ಸಿರಿಗಿರಿನಾಥ ಹೆಗ್ಗಡೆ ಪಾಲಿಸುತ್ತಿದ್ದನು. ಇದೇ ಕಾಲಘಟ್ಟದಲ್ಲಿ ತುಂಗಭದ್ರಾ ತೀರದಲ್ಲಿನ ರಾಮನಾಥ ದೇವರ ಅಮ್ರುತಪಡಿಗಾಗಿ ಬೊಮ್ಮಿಯಕ್ಕ ಹೆಗ್ಗಡಿತಿಯ ಮಗನಾದ ಮುತ್ತಪ್ಪರಸರು ಸತ್ರ ಭೂಮಿಗಳನ್ನು ದಾನವಾಗಿ ನೀಡಿರುವುದು. ಅದರಲ್ಲಿ ಮಲೆಯಲ ಮಠದ ಪದ್ಮನಾಭ ಶ್ರೀಪಾದರು ಮತ್ತು ಗಂಗಾಧರಪುರಿ ಶ್ರೀಪಾದರು ಮಠವನ್ನು ನಿರ್ಮಾಣಮಾಡಿರುವುದು ಉಲ್ಲೇಖಿತವಾಗಿದೆ. ಈ ದಾನದ ವಿವರವನ್ನು ಮಲ್ಲರಸ ಎಂಬುವರು ಬರೆದಿರುತ್ತಾರೆ ಎಂಬುದು ತಿಳಿದುಬರುತ್ತದೆ.

ತೂದೂರು ಗ್ರಾಮದ ಮಂಜಪ್ಪನವರಲ್ಲಿದ್ದ ಸರಿಸುಮಾರು ಕ್ರಿ.ಶ.ಏಪ್ರಿಲ್,21,1445ರ ಒಂಭತ್ತನೆಯ ತಾಮ್ರ ಶಾಸನ ಸಂಖ್ಯೆ–169ರಲ್ಲಿ ನಾಗರಿ ಲಿಪಿಯ ಲಕ್ಷಣಗಳನ್ನು ಹೊಂದಿದೆ. ಹಾಗೆಯೇ, ವಿಜಯನಗರದ ಸಾಮ್ರಾಜ್ಯದಲ್ಲಿ ಎರಡನೆಯ ದೇವರಾಯನು ಆಡಳಿತವನ್ನು ಮತ್ತು ಇವರ ವಂಶಾವಳಿಯನ್ನು ದಾಖಲಿಸಿರುತ್ತದೆ. ಇದೇ ಕಾಲಘಟ್ಟದಲ್ಲಿ ಅನಂತದಿಂದ ಆರಗ ರಾಜಧಾನಿಯನ್ನು ನಿಡುಬಾಲನಾಡ ಲಕ್ಷ್ಮೀನಾರಾಯಣಪುರದ ಮೆಣಂಗಿ ಗ್ರಾಮವನ್ನು ದಾನವಾಗಿ ನೀಡಿರುವುದು. ಈ ದಾನವನ್ನು ನೀಡಲು ಮುದ್ದಣಚಾರ್ಯರ ಮಗನಾದ ವೀರಣ್ಣನು ಕಾರಣವಾಗಿರುವುದು ಕಂಡುಬರುತ್ತದೆ.

ಬೆಳಲಿ ಗ್ರಾಮದಲ್ಲಿ ದೊರೆಕಿರುವ ಸರಿಸುಮಾರು ಕ್ರಿ.ಶ.15ನೇ ಶತಮಾನದ ಒಂದನೆಯ ಶಾಸನ ಸಂಖ್ಯೆ–189ರಲ್ಲಿ ವಿಜಯನಗರದ ಸಾಮ್ರಾಜ್ಯವನ್ನು ದೇವರಾಯನು ಆಳುತ್ತಿದ್ದನು ಎಂಬುದನ್ನು ಮತ್ತು ಇದು ನಾಗರಿ ಲಿಪಿಯ ಲಕ್ಷಣಗಳನ್ನು ಹೊಂದಿರುವುದು, ಇದೇ ಕಾಲಘಟ್ಟದಲ್ಲಿ ಆರಗ ರಾಜ್ಯವನ್ನು ರಾಯಣ್ಣನು ಪಾಲಿಸುತ್ತಿದ್ದನು. ಆವಾಗ; ಆರಗದ ಹದಿನೆಂಟು ಕಂಪಣದ ಸಮಸ್ತನಾಡಿನ ಮೂರುಪಟ್ಟಣದ ಸಮಸ್ತ ಹಲವರು ತಮ್ಮೊಳಗಿನ ಕಶ್ಯಪಗೋತ್ರದ ಬಂಕರಸನ ಮಗನಾದ ವಿಠ್ಠಪ್ಪಗಳಿಗೆ ಭೂಮಿಯನ್ನು ಕ್ರಯದಾನವಾಗಿ ಕೊಟ್ಟಿರುವ ಉಲ್ಲೇಖವಿದೆ. ಹಾಗೆಯೇ, ಕ್ರಮದಾನ ಪತ್ರವನ್ನು ಹೊನ್ನಗುಂಡಿ ಎಂಬುವರ ಮಗನಾದ ಸೇನಬೋವ ಮಲ್ಲಪ್ಪನು ಬರೆದಿರುತ್ತಾನೆ ಎಂಬುದು ತಿಳಿದುಬರುತ್ತದೆ.

ಹೊರಣೆಬಯಲು ಗ್ರಾಮದ ಗುಮ್ಮನಕಲ್ಲಿಗೆ ತಿರುಗುವ ದಾರಿಯಲ್ಲಿ ಸರಿಸುಮಾರು ಕ್ರಿ.ಶ. 15ನೇ ಶತಮಾನದ ಕಲ್ಲು ಶಾಸನ ಸಂಖ್ಯೆ–241ರಲ್ಲಿ ದೇವರಾಯನು ವಿಜಯನಗರದ ಸಾಮ್ರಾಜ್ಯದಲ್ಲಿ ಆಡಳಿತ ಮಾಡುತ್ತಿದ್ದನು. ಆವಾಗ; ಲಕ್ಕರಸ ಒಡೆಯರಿಂದ ಬೊಪ್ಪ ಹೆಗ್ಗಡೆ ಅವರಿಗೆ 60 ಹೊನ್ನುಗಳ ಬಾಡಿಗೆಯ ಉಚಿತವಾಗಿ ನೀಡಿರುವುದು. ಇದೇ ಭೂಮಿಯನ್ನು ಅಗ್ರಹಾರಕ್ಕೆ ನೀಡಿರುವುದಾಗಿ ಹೇಳಿರುವುದು. ಇದನ್ನು ಸೇನಬೋವ ಬೊಮ್ಮರಸ ಎಂಬುವರು ಬರೆದಿರುತ್ತಾರೆ ಎಂದು ಹೇಳಬಹುದು. ಹೊರಬರಲು ಕೆಕ್ಕಾನಹಡುನಲ್ಲಿರುವ ಸರಿಸುಮಾರು ಕ್ರಿ.ಶ. ಡಿಸೆಂಬರ್ 25, 1451ರ ಕಲ್ಲು ಶಾಸನ ಸಂಖ್ಯೆ–242ರಲ್ಲಿ ಈ ಪ್ರದೇಶವನ್ನು ಆಳಿರುವ ರಾಜ ಹೆಸರು ಮತ್ತು ದಾನ ನಿಡಿರುವವರ ಹೆಸರು ಹಾನಿಯಾಗಿದೆ. ಹಾಗೆಯೇ, ಸಿರಿಯಮಹೆಗ್ಗಡೆ, ಗೌರಪ್ಪ ಹೆಗ್ಗಡೆ ಮತ್ತು ಇತರರು ಮತ್ತು ಆರು ಸಲಗೆಗಳು, ಮನೆಗಳು, ಉದ್ಯಾನವನ ಇತರ ವ್ಯವಸ್ಥೆಗಳ ಸಾಮರ್ಥ್ಯವನ್ನು ನಿರ್ಮಿಸಲು ದಾನವಾಗಿ ಭೂಮಿಗಳನ್ನು ನೀಡಲಾಗಿರುವುದು ಉಲ್ಲೇಖಿತವಾಗಿದೆ.

ಹುರಳಿ ಗ್ರಾಮದಲ್ಲಿರುವ ಸರಿಸುಮಾರು ಕ್ರಿ.ಶ 15ನೇ ಶತಮಾನದ ಶಾಸನ ಸಂಖ್ಯೆ–234ರಲ್ಲಿ ಇಮ್ಮಡಿ ಪ್ರತಾಪ ದೇವರಾಯನು ವಿಜಯನಗರದ ಸಾಮ್ರಾಜ್ಯವನ್ನು ಆಳುತ್ತಿದ್ದನು. ಇದೇ ಕಾಘಟ್ಟದಲ್ಲಿ ಭೂಮಿಗಳನ್ನು ದಾನಧಾರಾಪೂರ್ವಕವಾಗಿ ಮಹಾಜನರಿಗೆ ನೀಡಿರುವುದು ಮತ್ತು ಇತರ ಮಾಹಿತಿಯು ಹಾನಿಯಾಗಿದೆ ಎಂಬುದು ಉಲ್ಲೇಖಿತವಾಗಿದೆ. ನಾಬಳ ಗ್ರಾಮದ ಗುಡ್ಡದ ಬದನೇಮಕ್ಕಿ ಕಾಡಿನಲ್ಲಿರುವ ವೀರಗಲ್ಲಿನ ಹಿಂಭಾಗದಲ್ಲಿರುವ ಸರಿಸುಮಾರು ಕ್ರಿ.ಶ. ಮಾರ್ಚ್ 9, 1468ರ ಶಾಸನ ಸಂಖ್ಯೆ–177ರಲ್ಲಿ ವಿರೂಪಾಕ್ಷನು ವಿದ್ಯಾನಗರದಿಂದ ಆಳುತ್ತಿದ್ದನು. ಆವಾಗ; ಆರಗ ರಾಜ್ಯವನ್ನು ಮಹಾಪ್ರಧಾನ ದೇವಪ್ಪ–ದಣ್ಣಾಯಕ ಒಡೆಯನು ಪಾಲಿಸುತ್ತಿದ್ದನು. ನಬಾಲ ಸ್ಥಳದಲ್ಲಿ ಬೊಮ್ಮರಸ ಹೆಗ್ಗಡೆ ಮತ್ತು ಕೊಟಿಯಪ್ಪ

ಹೆಗ್ಗಡೆ ಮತ್ತು ಯಲ್ಲಯಸಳಿಯ ಹೋರಾಟದಲ್ಲಿ ಮಡಿದಿರುವುದು ಮತ್ತು ಇತರ ಮಾಹಿತಿಯು ಹಾನಿಯಾಗಿರುವುದು ಉಲ್ಲೇಖವಾಗಿದೆ.

ಭಂಡೀಕೊಪ್ಪ ಗ್ರಾಮದ ಕರೇಗದ್ದೆಯ ತುದಿಯಲ್ಲಿ ನೆಟ್ಟಿರುವ ಸರಿಸುಮಾರು ಕ್ರಿ.ಶ. 15ನೇ ಶತಮಾನದ ಕಲ್ಲು ಶಾಸನ ಸಂಖ್ಯೆ–192ರಲ್ಲಿ ಈ ಪ್ರದೇಶವನ್ನು ಆಳಿರುವ ರಾಜರ ಹೆಸರು ಹಾನಿಯಾಗಿದೆ. ಆದರೂ ಮಲ್ಲಿನಾಥಭಟ್ಟರ ಮಕ್ಕಳು ಸೋಮಣ್ಣ ನಾಡಸೇನಬೋವ ಎಂಬುವನು ಬರೆದಿರುವ ಆರಗದ ಮೂಲಸ್ಥಾನದ ಕಲ್ಲಿನಾಥ ದೇವರ ಪ್ರಾರ್ಥನೆಗಾಗಿ ಹಲವು ಗಾವುಂಡರಿಗೆ ಭೂಮಿಗಳನ್ನು ದಾನಧಾರಾಪೂರ್ವಕವಾಗಿ ನೀಡಿರುವುದು ಉಲ್ಲೇಖಿತವಾಗಿದೆ ಎಂದು ಹೇಳಬಹುದು.

ಮೇಳಿಗೆ ಗ್ರಾಮದ ಆದಿನಾಥಸ್ವಾಮಿ ಬಸ್ತಿಯ ರಂಗಮಂಟಪದ ನೈರುತ್ಯ ಮೂಲೆಯಲ್ಲಿ ನೆಟ್ಟಿರುವ ಸರಿಸುಮಾರು ಕ್ರಿ.ಶ.ಜನವರಿ 24, 1610ರಲ್ಲಿ ರಚಿಸಿರುವ ಕಲ್ಲು ಶಾಸನ ಸಂಖ್ಯೆ–215ರಲ್ಲಿ ವಿಜಯನಗರದ ಅರಸನಾಗಿದ್ದ ವೆಂಕಟಪತಿದೇವನ ಆಳ್ವಿಕೆಯನ್ನು ಪೆನ್ನುಗೊಂಡೆ ಮತ್ತು ವೆಂಕಟಾದ್ರಿ ನಾಯಕನು ಪಾಲಿಸುತ್ತಿದ್ದ ಎಂಬುದು ಉಲ್ಲೇಖಿತವಾಗಿದೆ. ಆವಾಗ ಅನಂತ ಜೈನ ದೇವರಿಗೆ ಪ್ರಾರ್ಥನೆ ಸಲ್ಲಿಸುವ ಸಲುವಾಗಿ ಪದ್ಮಾ ಶೆಟ್ಟಿಯ ಮೂಲಕ ಅನಂತ ಜೈನರ ಹೆಸರಿನ ತೀರ್ಥೆಸ್ವರವನ್ನು ತಾತನಾದ ಬೊಮ್ಮ ಸೆಟ್ಟಿಯ ಮೂಲ ಬಸದಿಯನ್ನು ನಿರ್ಮಾಣ ಮಾದಲು ಕಲ್ಲನ್ನು ಮೇಳಿಗೆಯ ಬೊಮ್ಮಗಿರಿ ಶೆಟ್ಟಿ ಮತ್ತು ಸೆಮಂಬ್ ಅವರ ಮಕ್ಕಳಾದ ಅದರ್ಯ ಶೆಟ್ಟಿ, ಮಾವಿನಶೆಟ್ಟಿ, ಚಂದನ ಶೆಟ್ಟಿ, ಪಾದುಮಾಣ ಶೆಟ್ಟಿ, ಬೊಮ್ಮಣ ಶೆಟ್ಟಿ ಎಂಬುವವರಿಗೆ ಅನುದಾನವಾಗಿ ನೀಡಿರುವುದು ಉಲ್ಲೇಖಿತವಾಗಿರುತ್ತದೆ. ಹಾಗೆಯೇ ಇದೇ ಬೊಮ್ಮಣ್ಣ ಶೆಟ್ಟಿ ಮತ್ತು ಇತರ ಸಹೋದರರು ಆದಿನಾಥಸ್ವಾಮಿ ದೇವರಿಗೆ ಪ್ರಾರ್ಥನೆ, ಕೈಂಕರ್ಯಗಳು ಹಾಗೂ ದೀಪಾಲಂಕಾರಗಳಿಗೆ ಅನುದಾನ ನೀಡಿರುವುದನ್ನು ದಾಖಲೆಯಲ್ಲಿ ಹೆಸರಿಸಲಾಗಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


1. ಶಿವಮೊಗ್ಗ ಜಿಲ್ಲಾ ಗ್ಯಾಜೆಟಿಯರ್–ಕರ್ನಾಟಕ ರಾಜ್ಯ ಗ್ಯಾಜೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, 1975.
2. ಸೂರ್ಯನಾಥ್ ಕಾಮತ್–ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಬೆಂಗಳೂರು, 1980.
3. ತಿಪ್ಪೇರುದ್ರಸ್ವಾಮಿ.ಹೆಚ್.–ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಬೆಂಗಳೂರು, 1985.
4. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–13, ತೀರ್ಥಹಳ್ಳಿ ತಾಲೂಕು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ, ಮೈಸೂರು,2006.